<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

**ಓ.ಎಸ್. ಸಂಖ್ಯೆ.2346-2022** ಪಿ.ಡಬ್ಲೂ .1

**ದಿನಾಂಕಃ 04-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

ಮುಂದುವರೆದ <u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

1. ಗೋವಿಂದಪ್ಪ ಎಂಬುವವರು ಪ್ರತಿವಾದಿ ರವರ ತಂದೆ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನವರ ನಡುವೆ ಆದ ವಿಭಾಗದಲ್ಲಿ ಅವರ ಹಿಸ್ಸೆಗಳ ನಡುವೆ ವೆಂಕಟಸ್ವಾ ಮಿಯವರ ಜಮೀನು ಬರುತ್ತದೆ ಎಂದರೆ ಸರಿ. ನಮ್ಮ ಹಿಸ್ಸೆ ಯ ಪಶ್ಚಿಮಕ್ಕೆ ಇರುವ ಆಸ್ತಿ ಪ್ರತಿವಾದಿ ತಂದೆ ಗೋವಿಂದಪ್ಪನವರಿಗೆ ಸೇರಿದ ಆಸ್ತಿ ಬರುತ್ತದೆ ಎಂದರೆ ಸರಿ. ಸದರಿ ಗೋವಿಂದಪ್ಪ ಮರಣ ಹೊಂದಿದ್ದು ಅವರ ಮಗ ಪ್ರತಿವಾದಿ ಸ್ವಾಧೀನದಲ್ಲಿದಾರೆ ಎಂದರೆ ಸರಿ .ಸದರಿ ಆಸ್ತಿಯಲ್ಲಿ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಸ್ವಲ್ಪ ಬೆಳೆ ಬೆಳೆದಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಪಶ್ಚಮಕ್ಕೆ ಸೊಣ್ಣಪ್ಪನವರ ಚಂದ್ರಪ್ಪನವರ ಜಮೀನು ಬರುತ್ತದೆ ಎಂದರೆ ಸರಿ . ಉತ್ತರಕ್ಕೆ ಪಾಪಣ್ಣನವರ ಜಮೀನು ,ದಕ್ಷಿಣಕ್ಕೆ ಮುನಿರಾಮಯ್ಯನ ರವರ ಮಗ ಸೋಮಶೇಖರ ಅವರ ಜಮೀನು ಬರುತ್ತದೆ ಎಂದರೆ ಸರಿ . ಸದರಿ 30 ಗುಂಟೆ ಜಮೀನು ಪ್ರತಿವಾದಿಗೆ ಅವರ ಅಣ್ಣತಮ್ಮಂದಿರ ನಡುವೆ ಆದ ವಿಭಾಗದಲ್ಲಿ ಬಂದಿರುತ್ತದೆ ಎಂದರೆ ಸುಳ್ಳು .ನಿಪಿ.27 ರಲ್ಲಿ ಆ ಬಗ್ಗೆ ಪ್ರತಿವಾದಿ ಹೆಸರಿನಲ್ಲಿ ಖಾತೆ ಇದೆ ಎಂದರೆ ಸಾಕ್ಷಿ ಅವರು ಎ.ಸಿ ಆದೇಶದಂತೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ . ಸದರಿ ಎ.ಸಿ ಆದೇಶದ ಮೇಲೆ ನಾವು ಡಿ.ಸಿ ರವರ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇವು ಎಂದರೆ ಸರಿ . ಸದರಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ ಹೇಳಿರುತ್ತಾರೆ.

2. ನಿಪಿ.27 ರಂತೆ ಪ್ರತಿವಾದಿ ಹೆಸರಿಗೆ ಎಮ್.ಆರ್ ನಂ.12/98-99 ರಂತೆ ಮುಟೇಶನ್ ನಮೂದಾಗಿದೆ ಎಂದರೆ ಸರಿ . ಸದರಿ ಮುಟೇಶನನ್ನು ನಾನು ಕಂದಾಯ ಇಲಾಖೆ ಯಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ . ಸದರಿ ದಾಖಲೆಗಳನ್ನು ಹಾಜರು ಮಾಡಿರಬಹುದು. ಸದರಿ ಪ್ರಕರಣದ ನಂಬರ್ ಗೊತ್ತಿಲ್ಲ. ಅದನ್ನು ತಹಶೀಲ್ದಾರ್, ಎಸಿ ಮತ್ತು ಡಿಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ. ಸದರಿ ಮುಟೇಶನ್ ವಜಾ ಆಗಿಲ್ಲ. ನಾನು ಆ ರೀತಿ ನಿಪಿ.27 ರಲ್ಲಿ ನಮೂದಾಗಿರುವ ಮುಟೇಶನ್‌ನ್ನು ಎಲ್ಲಿಯೂ ಸಹ ಪ್ರಶ್ನೆ ಮಾಡಿಲ್ಲದೆ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸ.ನಂ.38 ಕ್ಕೆ ಸಂಬಂಧಿಸಿದಂತೆ ನಾನು ಡಿಡಿಎಲ್‌ಆರ್ ರವರ ಮುಂದೆ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ ಆದೇಶಿಸಿರುತ್ತಾರೆ. ನಾನು ಈ ದಾವೆಯನ್ನು 30 ಗುಂಟೆಗೆ ಸಲ್ಲಿಸಿದ್ದು ಅದರ ಚಕ್ಕು ಬಂದಿ ಪೂರ್ವಕ್ಕೆ ನಮ್ಮ ತಂದೆ ಕೃಷ್ಣಪ್ಪ ರವರರಿಗೆ ಸೇರಿದ ಜಮೀನು, ಪಶ್ಚಮಕ್ಕೆ ಗೋವಿಂದಪ್ಪನವರ ಜಮೀನು, ಉತ್ತರಕ್ಕೆ ಮುನಿರಾಮಯ್ಯನ ಜಮೀನು, ದಕ್ಷಿಣಕ್ಕೆ ಪಾಪಣ್ಣನವರು ಇರುತ್ತದೆ. ದಾವೆಯ ವಾದಪತ್ರಕ್ಕೆ ಚೆಕ್ಕು ಬಂದಿಯನ್ನು 1 ನೇ ವಾದಿ ಹೇಳಿ ಬರೆಸಿರುತ್ತಾರೆ. ಸದರಿ ಚೆಕ್ಕು ಬಂದಿ ಬಗ್ಗೆ ಗೊತ್ತು .ನಾನು ಪಶ್ಚಿಮ ದಿಕ್ಕಿಗೆ ಗೋವಿಂದಪ್ಪನ ಜಮೀನು ಎಂದು ಹೇಳಿದ್ದು ವಾದಿ ಪತ್ರದಲ್ಲಿ ಸೊಣ್ಣಪ್ಪನವರ ಜಮೀನು ಎಂದು ಬರೆಸಿದ್ದು ಗೋವಿಂದಪ್ಪನವರ ಜಮೀನು ಎಂದು ಹೇಳಿರುವುದು ಸರಿ ಇರುತ್ತದೆ. ಸದರಿ ಗೋವಿಂದಪ್ಪ ಪ್ರತಿವಾದಿಯ ತಂದೆ ಎಂದರೆ ಹೌದು. ಸದರಿ ಗೋವಿಂದಪ್ಪನವರ ಸ.ನಂ.38/1 ಆಗಿರುತ್ತದೆ. ಅದರ ವಿಸ್ತೀರ್ಣ ಗೊತ್ತಿಲ್ಲ. ಅದೇ ರೀತಿ ಉತ್ತರಕ್ಕೆ ಮುನಿರಾಮಯ್ಯನವರ ಜಮೀನು ಎಂದು ಹೇಳಿದ್ದು, ವಾದ ಪತ್ರದಲ್ಲಿ ಪಾಪಣ್ಣನವರ ಜಮೀನು ಎಂದು ತೋರಿಸಿದ್ದು ಮುನಿರಾಮಯ್ಯನ ಜಮೀನು ಎಂದು ಹೇಳಿರುವುದು ಸರಿ ಇರುತ್ತದೆ. ಅದೇ ರೀತಿ ದಕ್ಷಿಣಕ್ಕೆ ಪಾಪಣ್ಣನವರು ಜಮೀನು ಎಂದು ಹೇಳಿರುವುದು ಸರಿ ಇರುತ್ತದೆ. ನಾನು

ಹೇಳಿರುವ ಮತ್ತು ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕು ಬಂದಿ ತೋರಿಸಲು ಯಾವುದೇ ದಾಖಲೆಗಳು ಇಲ್ಲ.

4. ಪ್ರತಿವಾದಿ ಜಮೀನನ್ನು ನಮಗೆ ಬಿಡಿಸಿಕೊಡುವಂತೆ ನಾನು ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1998-99 ರಂತೆ ವಿಭಾಗ ಮಾಡಿಕೊಂಡು ಖಾತೆ ಬದಲಾವಣೆ ಮಾಡಿಸಿ ಸ್ವಾಧೀನದಲ್ಲಿದ್ದಾರೆ ಎಂದರೆ ಹೌದು. ಪ್ರತಿವಾದಿ ವಿಭಾಗ ಮಾಡಿಕೊಂಡಿರುವ 30 ಗುಂಟೆಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ ಕುಟುಂಬದಲ್ಲಿ ಆದ ವಿಭಾಗವನ್ನು ನಾನು ಎಲ್ಲೂ ಪ್ರಶ್ನೆ ಮಾಡಿಲ್ಲ ಎಂದರೆ ಹೌದು. ಸದರಿ ವಿಭಾಗ ಆಂಜನಪ್ಪ ಮತ್ತು ಮುನಿರಾಜಪ್ಪ ನವರ ನಡುವೆ ಆಗಿರುತ್ತದೆ . ಸದರಿ ಆಂಜನಪ್ಪರವರು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

5. ಮುನಿರಾಜಪ್ಪ ನವರಿಗೆ ಸೇರಿದ 30 ಗುಂಟೆ ಜಮೀನಿನ ಖಾತೆಯನ್ನು ನನ್ನ ತಂದೆ ಕೃಷ್ಣಪ್ಪ ಮತ್ತು 1 ನೇ ವಾದಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಖಾತೆ ಎಸಿ ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ ಎಂದರೆ ಹೌದು. ದಾವಾ ಆಸ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸುಳ್ಳು .ನಿಪಿ.3 ರ ಮುಟೇಶನ್ ಆಗುವ ಪೂರ್ವದಲ್ಲಿ ನನ್ನ ತಂದೆ ಮತ್ತು 1 ನೇ ವಾದಿ ಹೆಸರಿನಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ . ನನ್ನ ತಾತ ರಾಮಯ್ಯನವರ ಹೆಸರಿನಲ್ಲಿ ನಿಪಿ.8 ರಂತೆ ದಾಖಲೆ ಇರುತ್ತದೆ. ಸದರಿ ನಿಪಿ.8 ರಲ್ಲಿ ರಾಮಯ್ಯನವರ ಹೆಸರಿನಲ್ಲಿ ಕ್ರಯ 1 ಎಕರೇ 22 ½ ಗುಂಟೆ ಎಂದು ನಮೂದಾಗಿದೆ ಎಂದರೆ ಹೌದು. ಸದರಿ ವಿಸ್ತೀರ್ಣ ಹೊರತು ಪಡಿಸಿ ರಾಮಯ್ಯನವರ ಹೆಸರಿನಲ್ಲಿ ಬೇರೆ ವಿಸ್ತೀರ್ಣ ನಮೂದಾಗಿಲ್ಲ ಎಂದರೆ ಸರಿ . ನಿಪಿ.12 ರಲ್ಲಿ ಮುನಿರಾಜು ಬಿನ್ ಗೋವಿಂದಪ್ಪ 30 ಗುಂಟೆ ಎಮ್ ಆರ್ 12/ 98-99 ವಿಭಾಗ ಎಂದು ನಮೂದಾಗಿದೆ ಎಂದರೆ ಹೌದು. ನಿಪಿ.4 ರಂತೆ ರಾಮಯ್ಯನವರ ಹೆಸರಿನಲ್ಲಿದ್ದ 1 ಎಕರೆ 22 ½ ಗುಂಟೆ ಜಮೀನನ್ನು 1 ನೇ ವಾದಿ , ನನ್ನ ತಂದೆ

ಕೃಷ್ಣಪ್ಪ ಮತ್ತು ವಂಕೆಟಸ್ವಾಮಿ ತಲಾ 3 ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಹೌದು . ಸ.ನಂ. 38/1 ರಲ್ಲಿ ಸದರಿ 1 ಎಕರೆ 22 ½ ಗುಂಟೆ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ನಮಗೆ ಸೇರಿರುವುದಿಲ್ಲ ಎಂದರೆ ಸುಳ್ಳು. ನಮಗೆ 1 ಎಕರೆ 22 ½ ಗುಂಟೆ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ನಮಗೆ ಸೇರಿಲ್ಲದೆ ಇದ್ದರೂ ತಪ್ಪು ಖಾತೆಯನ್ನು ಮಾಡಿಸಿಕೊಂಡು ಸುಳ್ಳು ಕೇಸು ಹಾಕಿರುತ್ತೀರಾ ಎಂದರೆ ಸುಳ್ಳು. ನಿಪಿ.3 ರಲ್ಲಿ ಹೇಳಿರುವ 1990 ರ ಪಂಚಾಯಿತಿ ವಿಭಾಗ ಪತ್ರವನ್ನು ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿ ಸದರಿ ದಾಖಲೆಗಳು ಇಲ್ಲ ಎಂದು ನುಡಿಯುತ್ತಾರೆ. ಸದರಿ ಪಂಚಾಯಿತಿ ವಿಭಾಗ 1 ನೇ ವಾದಿ ,ಕೃಷ್ಣಪ್ಪ ಮತ್ತು ವೆಂಕಟಸ್ವಾಮಿರವರ ನಡುವೆ ಎಲ್ಲಾ ಜಮೀನುಗಳ ಬಗ್ಗೆ ಆಗಿರುತ್ತದೆ. ಸದರಿ ವಿಭಾಗದಲ್ಲಿ ಸೇರಿದ ಜಮೀನಿನ ಸ.ನಂಬರ್ ಗಳು ಗೊತ್ತಿಲ್ಲ. ನಿಪಿ.3 ರ ಮುಟೇಶನ್ ನಲ್ಲಿ ಸ.ನಂ.38/1 ನ್ನು ಹೊರತು ಪಡಿಸಿ ಬೇರೆ ಜಮೀನುಗಳ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ .

6. ನಿಪಿ.4 ರಲ್ಲಿ ಹೇಳಿರುವ ದಿ.12-02-1997 ರ ಪಂಚಾಯಿತಿ ವಿಭಾಗ 1 ನೇ ವಾದಿ ,ಕೃಷ್ಣಪ್ಪ ಮತ್ತು ವೆಂಕಟಸ್ವಾಮಿರವರ ನಡುವೆ ಆಗಿರುತ್ತದೆ. ಸದರಿ ಪಂಚಾಯಿತಿ ವಿಭಾಗ ಪತ್ರ ನಮ್ಮ ಬಳಿ ಇಲ್ಲ. ನಿಪಿ.4 ರಲ್ಲಿ ದಾವಾ ಆಸ್ತಿಯ ಬಗ್ಗೆ ಖಾತೆ ನಮೂದಾಗಿಲ್ಲ ಎಂದರೆ ಹೌದು . ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲದೆ ಇದ್ದರೂ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.